**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 677/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಶಿವಕುಮಾರ್ ಎಸ್.** | ಪ್ರಾಸಾಃ 4 |
| ತಂದೆಯ/ಗಂಡನ ಹೆಸರು | | ಲೇಟ್ ಸೋಮಪ್ಪ | ಚಾಸಾಃ 7 |
| ವಯಸ್ಸು | | 51 ವರ್ಷ | |
| ಕೆಲಸ | | ಮುಖ್ಯ ಪೇದೆ, ಸರಗೂರು ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | | ಸರಗೂರು | ದಿಃ 12.04.2023 |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

ನಾನು ಕವಲಂದೆ ಪೊಲೀಸ್ ಠಾಣೆಯಲ್ಲಿ 2010 ರಿಂದ 2015 ರವರೆಗೆ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 10.11.2013 ರಂದು ನಾನು ಹಗಲು ಕರ್ತವ್ಯದಲ್ಲಿ ಠಾಣೆಯಲ್ಲಿ ಇದ್ದಾಗ ಚಾಸಾ-13 ರವರು ಆರೋಪಿಯು ಅಕ್ರಮವಾಗಿ ಸೀಮೆಎಣ್ಣೆಯನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಆದ್ದರಿಂದ ದಾಳಿಗೆ ಹೋಗಬೇಕಾಗಿದೆ ಎಂದು ನನಗೆ, ಚಾಸಾ-5 ಮತ್ತು 6 ರವರಿಗೆ ಮತ್ತು ಪಂಚಾಯಿತಿದಾರರಾದ ಚಾಸಾ-3 ಮತ್ತು 4 ರವರನ್ನು ಠಾಣೆಗೆ ಕರೆಯಿಸಿ ಅವರಿಗೆ ದಾಳಿಯ ಬಗ್ಗೆ ಮಾಹಿತಿ ತಿಳಿಸಿದ್ದರು. ಆ ಪ್ರಕಾರ ನಾನು, ಚಾಸಾ-5 ಮತ್ತು 6, ಚಾಸಾ-13 ಮತ್ತು ಪಂಚರು ಮಾಹಿತಿ ಬಂದ ಸ್ಥಳವಾದ ದೊಡ್ಡಕವಲಂದೆ ಗ್ರಾಮದ ಆರ್.ಕೆ. ಹೊಟೇಲ್ ಬಳಿ ಹೋದಾಗ ಆಹಾರ ನಿರೀಕ್ಷಕರು ಆರ್.ಕೆ. ಹೊಟೇಲ್ ಗೆ ಹೊಂದಿಕೊಂಡಂತಿರುವ ಮಳಿಗೆಯಲ್ಲಿ ನೀಲಿ ಸೀಮೆಎಣ್ಣೆ ಅಕ್ರಮ ದಾಸ್ತಾನು ಮಾಡಿಕೊಂಡು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ತೋರಿಸಿದ್ದು, ಅಲ್ಲಿ ಒಟ್ಟು 35 ಲೀಟರ್ ಸಾಮರ್ಥದ 6 ಪ್ಲಾಸ್ಟಿಕ್ ಕ್ಯಾನ್ ಗಳು ಇದ್ದು ಅವುಗಳ ಬುರುಡೆ ಬಿಚ್ಚಿ ನೋಡಲಾಗಿ ನೀಲಿ ಬಣ್ಣದ ಸೀಮೆಎಣ್ಣೆ ಇತ್ತು. ನೀಲಿ ಬಣ್ಣದ ಸೀಮೆಎಣ್ಣೆಯನ್ನು ಪಡಿತರ ಚೀಟಿದಾರರಿಗೆ ಹಂಚಿಕೆ ಮಾಡುವ ಸಲುವಾಗಿ ಮಾತ್ರ ಬಳಸಲಾಗುತ್ತದೆ. ಆರೋಪಿಯನ್ನು ಸೀಮೆಎಣ್ಣೆಯ ಬಗ್ಗೆ ಸೀಮೆಎಣ್ಣೆಯನ್ನು ಇಟ್ಟುಕೊಳ್ಳಲು ರಹದಾರಿ ಇದೆಯೇ ಎಂದು ಕೇಳಿದ್ದಕ್ಕೆ ಆರೋಪಿಯು ಇಲ್ಲ ಎಂದು ನುಡಿದಿರುತ್ತಾನೆ.

ಸದರಿ ಮಳಿಗೆಯನ್ನು ಪರಿಶೀಲಿಸಿದಾಗ ಅಲ್ಲಿ 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನ , ಒಂದು ಕಬ್ಬಿಣದ ಆಲಿಕೆ ಮತ್ತು ಕಬ್ಬಿಣದ ಬಕೆಟ್ ಕಂಡು ಬಂದಿದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಯಿತು. 6 ಪ್ಲಾಸ್ಟಿಕ್ ಕ್ಯಾನ್ ಗಳಲ್ಲಿ ಒಟ್ಟು 210 ಲೀಟರ್ ನೀಲಿ ಸೀಮೆಎಣ್ಣೆ ಇದ್ದು, ಅದರ ಪೈಕಿ 4 ಗಾಜಿನ ಬಾಟಲುಗಳಲ್ಲಿ ತಲಾ 750 ಎಂ.ಎಲ್ ನೀಲಿ ಸೀಮೆಎಣ್ಣೆಯನ್ನು ಮಾದರಿಗೆಂದು ತೆಗೆದು ಪಿ.ಆರ್.ಒ ಎಂಬ ಇಂಗ್ಲೀಷ್ ಅಕ್ಷರದಿಂದ ಬರೆದು ಅರಗಿನಿಂದ ಸೀಲ್ ಮಾಡಿ ತೆಗೆದಿರಿಸಲಾಯಿತು. ಉಳಿಕೆ ನೀಲಿ ಸೀಮೆಎಣ್ಣೆಯನ್ನು ದೊಡ್ಡ ಕವಲಂದೆಯ P.A.C.C.B ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನೀಡಲಾಯಿತು.

ಪಂಚನಾಮೆಯನ್ನು ಬೆಳಗ್ಗೆ 10.15 ರಿಂದ 12.30 ರವರೆಗೆ ಜರುಗಿಸಲಾಯಿತು. ನಂತರ ಆರೋಪಿ ಮತ್ತು ಅಮಾನತ್ತು ಪಡಿಸಿಕೊಂಡ ಪರಿಕರಗಳನ್ನು ಕವಲಂದೆ ಪೊಲೀಸ್ ಠಾಣೆಗೆ ನೀಡಲಾಗಿರುತ್ತದೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ಸ್ಥಳ ಪಂಚನಾಮೆ ಯಾಗಿದ್ದು, ಸ್ಥಳ ಪಂಚನಾಮೆ ಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆ ಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು.

ಮಹಜರ್ ಕಾಲದಲ್ಲಿ ಅಮಾನತ್ತು ಪಡಿಸಿಕೊಂಡ 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನ , ಒಂದು ಕಬ್ಬಿಣದ ಆಲಿಕೆ, ಕಬ್ಬಿಣದ ಬಕೆಟ್ ಮತ್ತು ಮಾದರಿಗೆಂದು ತೆಗೆದ 750 ಎಂ.ಎಲ್. ನ 4 ಗಾಜಿನ ಬಾಟಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 5 ಲೀಟರ್ ಸಾಮಾರ್ಥ್ಯದ ಒಂದು ಕಬ್ಬಿಣದ ಅಳತೆ ಮಾಪನ , ಒಂದು ಕಬ್ಬಿಣದ ಆಲಿಕೆ, ಕಬ್ಬಿಣದ ಬಕೆಟ್ ಮತ್ತು ಮಾದರಿಗೆಂದು ತೆಗೆದ 750 ಎಂ.ಎಲ್. ನ 4 ಗಾಜಿನ ಬಾಟಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಒ-1 ರಿಂದ ಎಂ.ಒ-7 ಎಂದು ಗುರುತಿಸಲಾಗಿದೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ಕೃತ್ಯ ನಡೆದ ದಿನ ನಾನು ಈ ಮೇಲೆ ಹೇಳಿದಂತೆ ಮಳಿಗೆಯಲ್ಲಿ ಸೀಮೆಎಣ್ಣೆಯನ್ನು ಅಕ್ರಮವಾಗಿ ದಾಸ್ತನು ಮಾಡಿರುತ್ತಾನೆ.

ಕೃತ್ಯ ನಡೆದ ದಿನವೇ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಆರ್.ಎಂ. ಆರೋಪಿ ಪರ ವಕೀಲರಿಂದಃ**

ಪಂಚರನ್ನು ಚಾಸಾ-13 ರವರು ಫೋನ್ ಮಾಡಿ ಠಾಣೆಗೆ ಕರೆಸಿದ್ದರು. ಪಂಚರು ತರದಲೆ ಗ್ರಾಮದವರು. ನಾನು ನನ್ನ ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಠಾಣೆಯಲ್ಲಿಯೇ ನಿಪಿ-1 ಕ್ಕೆ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

sd/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**